ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:ವಿವಾದ:146/2014-15 ದಿ: 29-07-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಓಲಟ್ಟಿ ಶ್ರೀಹರಿ
ತಂದೆ: ನಾಗೇಶ್ವರ ರಾವ್
ಬೂದಿಹಾಳು ಕ್ಯಾಂಪ್
ಸಿಂಧನೂರು ತಾಲೂಕ

2) ಎಸ್. ವಿಜಯಲಕ್ಷ್ಮೀ ಗಂಡ: ಸುಳುವಾಯಿ ಬುಸಪ್ಪ
ಇವರಿಗೆ ಜಿ.ಪಿ.ಎ.ಹೋಲ್ಡರ್ ಎಂ.ಶ್ರೀನಿವಾಸ
ಅಲಿಯಾಸ್ ಶ್ರೀನಿವಾಸರಾವ್
ತಂದೆ: ಮಲ್ಲನ ವೀರವೆಂಕಟ ಸತ್ಯನಾರಾಯಣ ಅಲಿಯಾಸ್
ವೆಂಕಟರಾವ್, ಹಿರೇಹಾಳು ಕ್ಯಾಂಪ್
ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಹೆಚ್. ಹಂಪನಗೌಡ
ತಂದೆ: ಹೆಚ್. ಮಲ್ಲನಗೌಡ
ಹಿರೇಹಾಳು ಗ್ರಾಮ
ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಹಿರೇಹಾಳು ಗ್ರಾಮ | **188 A/2** | 1-40 | H-37/2013-14 | 82/2013-14 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಹಿರೇಹಾಳು ಗ್ರಾಮದ ಸ.ನಂ.188 A/2** ವಿಸ್ತೀರ್ಣ **1-40** ಎಕರೆಜಮೀನಿಗೆ ಸಂಭಂದಿಸಿದಂತೆ ಸಿರುಗುಪ್ಪ ಸಬ್ ರಿಜಿಸ್ಟರ್‌ಕಛೇರಿ ಖರೀದಿ ಪತ್ರ ನಂ: **SRG-1-05684/13-14 Dt. 25-1-2014** ರ ಪ್ರಕಾರ **ಓಲಟ್ಟಿ ಶ್ರೀಹರಿ ತಂದೆ: ನಾಗೇಶ್ವರ ರಾವ್ ಇವರ ಹೆಸರಿನಲ್ಲಿ** ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಹೆಚ್.ಹಂಪನಗೌಡ ತಂದೆ: ಹೆಚ್. ಮಲ್ಲನಗೌಡ ಹಿರೇಹಾಳು ಗ್ರಾಮ** ಇವರು **ದಿ:24-02-2014** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:14-08-2015, 29-01-2016, 02-04-2016 20-05-2016, 03-06-2016, 24-06-2016, ಮತ್ತು 22-07-2016 ರಂದು ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು

ವಾದಿಗಳಾದ ಓಲಟ್ಟಿ ಶ್ರೀಹರಿ ತಂದೆ: ನಾಗೇಶ್ವರ ರಾವ್ ಬೂದಿಹಾಳ್‌ಕ್ಯಾಂಪ್, ಸಿಂಧನೂರು ಇವರು ಹಿರೇಹಾಳು ಗ್ರಾಮದ ಸ.ನಂ.188 A/2 ವಿಸ್ತೀರ್ಣ 1-40 ಎಕರೆ ಜಮೀನು ಎಸ್.ವಿಜಯಲಕ್ಷ್ಮೀ ಗಂಡ:ಸೂಳುವಾಯಿ ಬುಸ್ಸಪ್ಪ ಇವರ ಜಿ.ಪಿ.ಎ.ಹೋಲ್ಡರ್ ಎಂ.ಶ್ರೀನಿವಾಸ ಅಲಿಯಸ್ ಶ್ರೀನಿವಾಸರಾವ್ ತಂದೆ: ಮಲ್ಲನ ವೀರವೆಂಕಟ ಸತ್ಯನಾರಾಯಣ ಅಲಿಯಾಸ್ ವೆಂಕಟರಾವ್ ಹಿರೇಹಾಳು ಗ್ರಾಮ ಇವರಿಂದ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಖರೀದಿ ಪತ್ರ ನಂ:SRG-1-05684/13-14 Dt.25-1-2014 ರಂದು ಖರೀದಿ ನೊಂದಣಿ ಹೊಂದಿದ ಪ್ರಕಾರ ಹಕ್ಕು ಬದಲಾವಣೆ ಸಂದರ್ಭದಲ್ಲಿ ಹಂಪನಗೌಡ ತಂದೆ: ಹೆಚ್. ಮಲ್ಲನಗೌಡ ಹಿರೇಹಾಳು ಗ್ರಾಮ ಇವರು ವಿನಾಕಾರಣ ನಿರಾಧಾರವಾಗಿ ತಕರಾರು ಅರ್ಜಿಸಲ್ಲಿಸಿದ್ದು ಯಾವುದೇ ವಿಚಾರಣೆಗೆ ಹಾಜರಾಗಿರುವುದಿಲ್ಲ ಮತ್ತು ಲಿಖಿತ ಹೇಳಿಕೆಗಳನ್ನು ಸಹ ನೀಡಿರುವುದಿಲ್ಲ ಆದ್ದರಿಮದ ಅವರ ತಕರಾರು ಅರ್ಜಿಯನ್ನು ತಳ್ಳಿಹಾಕಿ ನೊಂದಣಿ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಹಂಪನಗೌಡ ತಂದೆ: ಹೆಚ್.ಮಲ್ಲನಗೌಡ ಹಿರೇಹಾಳುಗ್ರಾಮ ಇವರು ಹಿರೇಹಾಳು ಗ್ರಾಮದ ಸ.ನಂ.188 A/2 ವಿಸ್ತೀರ್ಣ 1-40 ಎಕರೆ ಜಮೀನು ಎಸ್. ವಿಜಯಲಕ್ಷ್ಮೀ ಗಂಡ: ಸೂಳುವಾಯಿ ಬುಸ್ಸಪ್ಪ ಇವರ ಜಿ.ಪಿ.ಎ.ಹೋಲ್ಡರ್ ಎಂ.ಶ್ರೀನಿವಾಸ ಅಲಿಯಸ್ ಶ್ರೀನಿವಾಸರಾವ್ ತಂದೆ: ಮಲ್ಲನ ವೀರವೆಂಕಟ ಸತ್ಯನಾರಾಯಣ ಅಲಿಯಾಸ್ ವೆಂಕಟರಾವ್ ಹಿರೇಹಾಳುಗ್ರಾಮ ಇವರಿಂದ ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿ ಖರೀದಿ ಪತ್ರ ನಂ:SRG-1-05684/13-14 Dt. 25-1-2014 ರಂದು ಖರೀದಿ ನೊಂದಣಿ ಹೊಂದಿದ ಪ್ರಕಾರ ಹಕ್ಕು ಬದಲಾವಣೆ ಸಂದರ್ಭದಲ್ಲಿ ದಿ:24-02-2014 ರಂದು ತಕರಾರು ಅರ್ಜಿಸಲ್ಲಿಸಿದ್ದು ವಿಚಾರಣೆ ದಿನಾಂಕಗಳಂದು ಹಾಜರಾಗಲು ನೋಟೀಸ್‌ದ್ವಾರ ತಿಳಿಸಿದಾಗ್ಯೂ ವಿಚಾರಣಾ ದಿನಾಂಕಗಳಂದು ಹಾಜರು ಹಾಗಿರುವುದಿಲ್ಲ. ಹಾಗೂ ಲಿಖಿತ ಹೇಳಿಕೆಗಳನ್ನಾಗಲಿ ಅಥವಾ ಸಂಭಂದಿಸಿದ ದಾಖಲೆಗಳನ್ನಾಗಲೀ ಸಲ್ಲಿಸಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿ ಖರೀದಿ ಪತ್ರ ನಂ:SRG-1-05684/13-14 Dt. 25-1-2014 ರ ಖರೀದಿ ನೊಂದಣಿ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಹಿರೇಹಾಳು ಗ್ರಾಮದ ಸ.ನಂ.188A/2 ವಿಸ್ತೀರ್ಣ 1-40 ಸೆಂಟ್ಸ್ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿ ಖರೀದಿ ಪತ್ರ ನಂ:SRG-1-05684/13-14 Dt. 25-1-2014 ರ ಪ್ರಕಾರ ಓಲಟ್ಟಿ ಶ್ರೀಹರಿ ತಂದೆ: ನಗೇಶ್ವರ ರಾವ್ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:19-07-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲೂಕು

ಉಪ ತಹಶೀಲ್ದಾರರ ಕಾರ್ಯಾಲಯ, ಸಿರುಗುಪ್ಪ ತಾಲೂಕು.

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ